**<u>ಸಾಕ್ಷಿಯನ್ನು ಇಂದು ದಿ.27.01.2025 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**
**<u>ಪಾಟೀ ಸವಾಲುಃ ಶ್ರೀ.SSG., ವಿಶೇಷ ಸರಕಾರಿ ವಕೀಲರಿಂದ 1 ರಿಂದ 3 ನೇ ಎದುರುದಾರರ ಪರವಾಗಿಃ</u>**

1) ನನ್ನ ಜಮೀನು ಸರ್ವೆ ನಂ.194/5 ಇದ್ದು, ಅದು ಒಟ್ಟು 02 ಎಕರೆ 07 ಗುಂಟೆ ಜಮೀನು ಇದ್ದು, ಅದರಲ್ಲಿ 05 ಗುಂಟೆ ಜಮೀನು ಸ್ವಾಧೀನಗೊಂಡಿರುತ್ತದೆ.

2) **ನಾನು ಈ ಪ್ರಕರಣವಲ್ಲದೇ ಬೇರೆ ಯಾವುದೇ ನ್ಯಾಯಾಲಯದಲ್ಲಿ ನನ್ನ ಸ್ವಾಧೀನಗೊಂಡ ಜಮೀನಿಗೆ ಸಂಬಂದಿಸಿದಂತೆ ಹೆಚ್ಚುವರಿ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿರುವದಿಲ್ಲ.**

3) ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಮತ್ತು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿದ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಜಮೀನು ಸ್ವಾಧೀನಪಡಿಸಿಕೊಳ್ಳುವ ಪೂರ್ವದಲ್ಲಿ ನನಗೆ ನೋಟಿಸನ್ನು ನೀಡಿರುತ್ತಾರೆ ಎಂದರೆ ಸರಿ. ನೋಟಿಸ ಜಾರಿ ಮಾಡಿದ ನಂತರ ಅಧಿಕಾರಿಗಳು ಬಂದು ಜಂಟಿ ಸರ್ವೆ ಮಾಡಿರುತ್ತಾರೆ ಎಂದರೆ ಸರಿ. ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ **ಹಲಗಣಿ** ಗ್ರಾಮಕ್ಕೆ ನಿಗದಿಮಾಡಿದ ಬೆಲೆಯನ್ನು ನಮಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

4) ಹೆಚ್ಚಿನ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿದ ದಿನಾಂಕ ನೆನಪಿಲ್ಲ. ಅರ್ಜಿಯನ್ನು ನಾನು ಸರಿಯಾದ ಸಮಯದಲ್ಲಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

5) ನನ್ನ ಜಮೀನು ಸಂಪೂರ್ಣ ಒಣಬೇಸಾಯದ ಜಮೀನು ಎಂದರೆ ಸರಿ.

6) ಎರೆ ಜಮೀನು ಹಾಗೂ ಮರಡಿ ಜಮೀನು ಕಿಮ್ಮತ್ತು ಬೇರೆ ಬೇರೆ ಇರುತ್ತವೆ ಎಂದರೆ ಸರಿ. ಭೂಮಿಯ ಫಲವತ್ತತೆ ಒಂದು ಜಮೀನದಿಂದ ಇನ್ನೊಂದು ಜಮೀನಕ್ಕೆ ಬೇರೆ ಬೇರೆ ಇರುತ್ತದೆ ಎಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣ ಪತ್ರದ ಪ್ಯಾರಾ ನಂ.5 ರಲ್ಲಿ ಹೇಳಿರುವ ಸಂಗತಿಗಳನ್ನು ಸಾಬೀತುಪಡಿಸಲು ಎ.ಪಿ.ಎಮ್.ಸಿಯಿಂದಾಗಲಿ ಅಥವಾ ಬೇರೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ.

7) ನಿ.ಪಿ.2 ರಿಂದ 8 ಬಬಲೇಶ್ವರ, ಕಂಬಾಗಿ, ಯಕ್ಕುಂಡಿ, ನಿಡೋಣಿ ಮತ್ತು ಮಮದಾಪೂರ ಗ್ರಾಮಗಳ ಖರೀದಿ ಪತ್ರಗಳು ಇದ್ದು, ಸದರಿ ಖರೀದಿ ಪತ್ರಗಳು ಯಾರಿಗೆ ಸಂಬಂಧಪಟ್ಟಿದ್ದು, ಯಾವ ಉದ್ದೇಶಕ್ಕೆ ಖರೀದಿ ಆಗಿರುತ್ತದೆ, ಎಷ್ಟು ಬೆಲೆಗೆ ಖರೀದಿಸಿರುತ್ತಾರೆ ಮತ್ತು ಸರ್ವೆ ನಂಬರ ಹೇಳಲು ಬರುವುದಿಲ್ಲ. ಬಬಲೇಶ್ವರ ಗ್ರಾಮದ ಖರೀದಿ ಪತ್ರದ ಜಮೀನಿಗೂ ಮತ್ತು ನನ್ನ ಜಮೀನಿಗೂ ಕನಿಷ್ಠ 20 ಕಿ.ಮೀ ಅಂತರ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 5 ಕಿ.ಮೀ ಅಂತರ ಇದೆ ಎಂದು ಸ್ವತಃ ಹೇಳುತ್ತಾರೆ. ಕಂಬಾಗಿ ಗ್ರಾಮದ ಖರೀದಿ ಪತ್ರದ ಜಮೀನಿಗೂ ಮತ್ತು ನನ್ನ ಜಮೀನಿಗೂ ಕನಿಷ್ಠ 15 ಕಿ.ಮೀ ಅಂತರ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 5 ಕಿ.ಮೀ ಅಂತರ ಇದೆ ಎಂದು ಸ್ವತಃ ಹೇಳುತ್ತಾರೆ. ಯಕ್ಕುಂಡಿ ಗ್ರಾಮದ ಖರೀದಿ ಪತ್ರದ ಜಮೀನಿಗೂ ಮತ್ತು ನನ್ನ ಜಮೀನಿಗೂ ಕನಿಷ್ಠ 18 ಕಿ.ಮೀ ಅಂತರ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 5 ಕಿ.ಮೀ ಅಂತರ

ಇದೆ ಎಂದು ಸ್ವತಃ ಹೇಳುತ್ತಾರೆ. ನಿಡೋಣಿ ಗ್ರಾಮದ ಖರೀದಿ ಪತ್ರದ ಜಮೀನಿಗೂ ಮತ್ತು ನನ್ನ ಜಮೀನಿಗೂ ಕನಿಷ್ಠ 25 ಕಿ.ಮೀ ಅಂತರ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 10 ಕಿ.ಮೀ ಅಂತರ ಇದೆ ಎಂದು ಸ್ವತಃ ಹೇಳುತ್ತಾರೆ. ಮಮದಾಪೂರ ಗ್ರಾಮದ ಖರೀದಿ ಪತ್ರದ ಜಮೀನಿಗೂ ಮತ್ತು ನನ್ನ ಜಮೀನಿಗೂ ಕನಿಷ್ಠ 16 ಕಿ.ಮೀ ಅಂತರ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 5 ಕಿ.ಮೀ ಅಂತರ ಇದೆ ಎಂದು ಸ್ವತಃ ಹೇಳುತ್ತಾರೆ. ನನ್ನ ಜಮೀನಿಗೂ ಖರೀದಿ ಪತ್ರದ ಜಮೀನುಗಳಿಗೂ ಇಂತಿಷ್ಟೇ ಅಂತರ ಇದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ.

8) ನಮ್ಮ ಗ್ರಾಮವಾದ ಹಲಗಣಿಯಲ್ಲಿ 2017 ಕ್ಕಿಂತ ಮುಂಚೆ ಸಾಕಷ್ಟು ಜಮೀನುಗಳು ಖರೀದಿಯಾಗಿರುತ್ತವೆ ಎಂದರೆ ಸರಿ. ನಾನು ಹಲಗಣಿ ಗ್ರಾಮದ ಯಾವುದೇ ಖರೀದಿ ಪತ್ರವನ್ನಾಗಲೀ ಅಥವಾ ಖರೀದಿ ಒಪ್ಪಂದ ಪತ್ರವನ್ನಾಗಲೀ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿದ ಕಂಬಾಗಿ ಮತ್ತು ಬಬಲೇಶ್ವರ ಗ್ರಾಮದ ಖರೀದಿ ಪತ್ರಗಳ ಜಮೀನುಗಳನ್ನು ಗುಂಟಾ ಲೆಕ್ಕದಲ್ಲಿ ವಾಣಿಜ್ಯ ಉದ್ದೇಶಕ್ಕಾಗಿ ಖರೀದಿಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

9) ನನ್ನ ಸಾಕ್ಷ್ಯ ಪ್ರಮಾಣ ಪತ್ರದ 13 ನೇ ಪ್ಯಾರಾದಲ್ಲಿ ತೋರಿಸಿದ ಜಮೀನುಗಳನ್ನು ವಾಣಿಜ್ಯ ಉದ್ದೇಶಕ್ಕಾಗಿ ಖರೀದಿಸಿರುತ್ತಾರೆ ಎಂದರೆ ಸರಿ. ನಾನು ಒಂದು ಎಕರೆಗೆ 80 ಲಕ್ಷ ಪರಿಹಾರ ಕೇಳಿದ್ದು, ಅದಕ್ಕೆ ಸೂಕ್ತ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನಿಗೆ ಸರ್ಕಾರ ಸೂಕ್ತವಾದ ಬೆಲೆ ಕೊಟ್ಟಿದ್ದರು ಸಹ ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ.SSS., ವಕೀಲರಿಂದ 4 ನೇ ಎದುರುದಾರ ಪರವಾಗಿಃ**

10) ನನ್ನ ಜಮೀನು ಸ್ವಾಧೀನ ಪಡಿಸಿಕೊಳ್ಳುವ ಮೊದಲು 1 ನೇ ಎದುರುದಾರರು ನನಗೆ ನೊಟೀಸನ್ನು ನೀಡಿರುತ್ತಾರೆ ಎಂದರೆ ಸರಿ. ಆ ನೊಟೀಸ ಮೇರೆಗೆ ನಾನು 1 ನೇ ಎದುರುದಾರರಲ್ಲಿಗೆ ಹೋಗಿ ಹಾಜರಾಗಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ನಾನು 1 ನೇ ಎದುರುದಾರರಲ್ಲಿ ನನ್ನ ಸ್ವಾಧೀನಗೊಳ್ಳುವ ಜಮೀನಿಗೆ ಇಂತಿಷ್ಟೇ ಮಾರುಕಟ್ಟೆ ಬೆಲೆ ಇರುತ್ತದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. 1 ನೇ ಎದುರುದಾರರು ನನ್ನ ಜಮೀನಿಗೆ ಸಂಬಂಧಿಸಿದಂತೆ ಮಾರುಕಟ್ಟೆ ಬೆಲೆಗೆ ಸರಿಯಾದ ದಾಖಲೆಗಳನ್ನು ಕಲೆಹಾಕಿ ಅವುಗಳ ಆಧಾರದ ಮೇಲೆ ಸರಿಯಾದ ಪರಿಹಾರ ನೀಡಿರುತ್ತಾರೆ ಎಂದರೆ ಸರಿಯಲ್ಲ.

11) ನಾನು ನನ್ನ ರೆಫರೆನ್ಸ ಅರ್ಜಿಯನ್ನು ಸರಿಯಾದ ಕಾಲಮಿತಿಯಲ್ಲಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

12) ನಾನು ನನ್ನ ಜಮೀನಿಗೆ ಹೆಚ್ಚಿನ ಪರಿಹಾರ ಕೋರಿ ರೆಫರೆನ್ಸ ಅರ್ಜಿಯನ್ನು 1 ನೇ ಎದುರುದಾರರಿಗೆ ಸಲ್ಲಿಸಿದ್ದು, ಸದರಿ ರೆಫರೆನ್ಸ ಅರ್ಜಿಯ ಜೊತೆಗೆ ಏಕೆ ಹೆಚ್ಚಿನ ಪರಿಹಾರ ಕೊಡಬೇಕು ಎಂದು ಪೂರಕವಾಗಿ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ನನ್ನ ಸಾಕ್ಷ್ಯದಲ್ಲಿ

ಹಾಜರುಪಡಿಸಿದ ನಿ.ಪಿ.2 ರಿಂದ 8 ಖರೀದಿ ಪತ್ರಗಳ ಬಗ್ಗೆಯೂ ನಾನು ನನ್ನ ರೆಫರೆನ್ಸ್ ಅರ್ಜಿಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ.

13) ನನ್ನ ಜಮೀನು ಒಣಬೇಸಾಯದ ಕೃಷಿ ಜಮೀನು ಎಂದರೆ ಸರಿ. ನಮ್ಮ ಊರು ಹಲಗಣಿ ಗ್ರಾಮದಲ್ಲಿ ಒಣಬೇಸಾಯದ ಜಮೀನುಗಳು ಸಾಕಷ್ಟು ಇರುತ್ತವೆ ಎಂದರೆ ಸರಿ. ನನ್ನ ಜಮೀನಿಗೆ ಇಂತಿಷ್ಟೇ ಮಾರುಕಟ್ಟೆ ಬೆಲೆ ಇರುತ್ತದೆ ಎಂದು ತೋರಿಸಲು ನನ್ನ ಜಮೀನು ಸ್ವಾಧೀನಪಡಿಸಿಕೊಳ್ಳುವ ಹಿಂದಿನ 3 ವರ್ಷಗಳ ಅವಧಿಯಲ್ಲಿ ಖರೀದಿಯಾದ ನಮ್ಮೂರಿನ ಜಮೀನುಗಳ ಖರೀದಿ ಪತ್ರಗಳನ್ನು ಅಥವಾ ಖರೀದಿ ಒಪ್ಪಂದ ಪತ್ರಗಳನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿದ ನಿ.ಪಿ.2 ರಿಂದ 8 ಖರೀದಿ ಪತ್ರದ ಜಮೀನುಗಳು 2015-16 ನೇ ಸಾಲಿನಲ್ಲಿ ಖರೀದಿಯಾಗಿರುತ್ತವೆ ಎಂದರೆ ಸರಿ.

14) ನಾನು ಹಾಜರುಪಡಿಸಿದ ನಿ.ಪಿ.2 ರಿಂದ 8 ಖರೀದಿ ಪತ್ರಗಳ ಜಮೀನುಗಳು ನನ್ನ ಜಮೀನಿನ ಸ್ವರೂಪದ ಜಮೀನುಗಳು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ಹೀಗಾಗಿ ಸದರಿ ಖರೀದಿ ಪತ್ರದ ಜಮೀನುಗಳು ನನ್ನ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ.

15) ನಾನು ಹಾಜರುಪಡಿಸಿದ ನಿ.ಪಿ.2 ರಿಂದ 8 ಖರೀದಿ ಪತ್ರದ ಜಮೀನುಗಳು ಹೆಚ್ಚಿನ ಬೆಲೆಗೆ ಮಾರಾಟವಾಗಿದ್ದು, ನಾನು ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಅವುಗಳನ್ನಷ್ಟೇ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಜಮೀನಿಗೆ ಸಂಬಂಧಿಸಿದಂತೆ 11(1) ಅಧಿಸೂಚನೆಯ ದಿನಾಂಕದಿಂದ ಒಳಗಿನ ಹಿಂದಿನ 3 ವರ್ಷದ ಅವಧಿಯೊಳಗಿನ ಹಲಗಣಿ ಗ್ರಾಮದಲ್ಲಿ ಖರೀದಿಗೊಂಡ ಎಲ್ಲಾ ಜಮೀನುಗಳ ಖರೀದಿ ಪತ್ರಗಳನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ. ನಮ್ಮ ಊರು ಹಲಗಣಿ ಗ್ರಾಮದಲ್ಲಿ ಸಾಕಷ್ಟು ಜಮೀನುಗಳು ಖರೀದಿಯಾಗಿದ್ದು, ಅವು ಕಡಿಮೆ ಬೆಲೆಗೆ ಮಾರಾಟವಾಗಿರುವ ಕಾರಣ ನಾನು ನನ್ನ ಜಮೀನಿಗೆ ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಹಲಗಣಿ ಗ್ರಾಮದ ಜಮೀನುಗಳ ಯಾವುದೇ ಖರೀದಿ ಪತ್ರಗಳನ್ನಾಗಲೀ ಅಥವಾ ಖರೀದಿ ಒಪ್ಪಂದ ಪತ್ರಗಳನ್ನಾಗಲೀ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಸರಕಾರದವರು ನಿಗದಿಪಡಿಸಿದ ಹಲಗಣಿ ಗ್ರಾಮದ ಜಮೀನುಗಳ ಮಾರುಕಟ್ಟೆಯ ಬೆಲೆಯನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ.

16) ನಾನು ಹಾಜರುಪಡಿಸಿದ ನಿ.ಪಿ.2 ರಿಂದ 8 ಜಮೀನುಗಳ ಗ್ರಾಮಗಳು ನನ್ನ ಜಮೀನದಿಂದ ಅಂದಾಜು 30-35 ಕಿ.ಮೀ ದೂರ ಇರುತ್ತವೆ ಎಂದರೆ ಸರಿಯಲ್ಲ. ಸದರಿ ಜಮೀನುಗಳು ಅಂದಾಜು 7-8 ಕಿ.ಮೀ ದೂರದಲ್ಲಿರುತ್ತವೆ ಎಂದು ಸಾಕ್ಷಿ ಹೇಳುತ್ತಾರೆ. ನಮ್ಮ ಊರು ಹಲಗಣಿಯಿಂದ ಕಂಬಾಗಿ, ನಿಡೋಣಿ, ಯಕ್ಕುಂಡಿ ಹಾಗೂ ಮಮದಾಪೂರ ತುಂಬಾ ದೂರ ಇರುತ್ತವೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ನಿ.ಪಿ.2 ರಿಂದ 8 ಖರೀದಿ ಪತ್ರಗಳು ನನ್ನ ಪ್ರಕರಣಕ್ಕೆ ಪೂರಕವಾದ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ನಮ್ಮ ಊರು ಹಲಗಣಿ ಗ್ರಾಮದ ಜಮೀನುಗಳಿಗೆ ಉಪ-ನೋಂದಣಾಧಿಕಾರಿಗಳು

ನಿಗದಿಪಡಿಸಿದ ಮಾರುಕಟ್ಟೆ ಬೆಲೆಯ ವಿವರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಜಮೀನಿಗೆ ಸಂಬಂಧಿಸಿದಂತೆ 11(1) ಅಧಿಸೂಚನೆಯ ದಿನಾಂಕದಿಂದ ಒಳಗಿನ ಹಿಂದಿನ 3 ವರ್ಷದ ಅವಧಿಯೊಳಗಿನ ಬಬಲೇಶ್ವರ, ಯಕ್ಕುಂಡಿ, ನಿಡೋಣಿ ಮತ್ತು ಮಮದಾಪೂರ ಗ್ರಾಮಗಳಲ್ಲಿ ಖರೀದಿಗೊಂಡ ಎಲ್ಲಾ ಜಮೀನುಗಳ ಖರೀದಿ ಪತ್ರಗಳನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ಗ್ರಾಮದ ಜಮೀನುಗಳು ಕಡಿಮೆ ಬೆಲೆಗೆ ಮಾರಾಟವಾಗಿರುವ ಕಾರಣ ನಾನು ನನ್ನ ಜಮೀನಿಗೆ ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಸದರಿ ಗ್ರಾಮಗಳ ಜಮೀನುಗಳ ಮೂರು ವರ್ಷಗಳ ಅವಧಿಯ ಯಾವುದೇ ಖರೀದಿ ಪತ್ರಗಳನ್ನಾಗಲೀ ಅಥವಾ ಖರೀದಿ ಒಪ್ಪಂದ ಪತ್ರಗಳನ್ನಾಗಲೀ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

17) ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ನನ್ನ ಜಮೀನಿಗೆ ಸಂಬಂಧಿಸಿದಂತೆ 1 ನೇ ಎದುರುದಾರರು ನಿಗದಿ ಮಾಡಿದ ಪರಿಹಾರ ಕಾನೂನು ಪ್ರಕಾರವಾಗಿ ಸರಿಯಾಗಿದೆ ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ. ಸರಿ ಅದೆ.

3 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ವಿಜಯಪುರ.